ದಿನಾಂಕ 12-03-2025 ರಂದು ಸಾಕ್ಷಿಗೆ ಪ್ರಮಾಣ ವಚನ  ಬೋಧಿಸಲಾಯಿತು.

ಪಾಟೀ ಸವಾಲುಃ  2 ನೇ ಎದುರುದಾರರ  ಪರವಾಗಿ ಶ್ರೀ ಡಿ.ಬಿ.ಎಸ್. ವಕೀಲರವರಿಂದಃ

ಅಪಘಾತವಾದ ದಿವಸ ಕೆಎ-20-ಇಜೆ-869 ಸದ್ರಿ ಮೋಟಾರ್ ಸೈಕಲ್ ನ್ನು ದಕ್ಷಿಣದ ಕಡೆಯಿಂದ ಉತ್ತರದ ಕಡೆಗೆ  ನಾನೇ ಚಾಲನೆ ಮಾಡುತ್ತಿದ್ದೆ.  ನನ್ನ ಬಳಿ ವಾಹನ ಚಾಲನಾ ಪರವಾನಗಿ ಇರಲಿಲ್ಲ.  ನಾನು ಆ ದಿನ ಹೆಲ್ಮೆಟ್ ಧರಿಸಿದ್ದೆ.  ಸದ್ರಿ

ಹೆಲ್ಮೆಟ್ ಹೊಡೆದು ಹೋಗಿರುವುದಿಲ್ಲ. ಮೊದಲು ಕ್ಲಿಪ್ ಹೊಡೆಯಿತು ಆ ನಂತರ ಹೆಲ್ಮೆಟ್ ಹಾರಿ ಹೋಯಿತು. ಅಪಘಾತವಾದ ನಂತರ ಬೀಳುವ ಸಮಯದಲ್ಲಿ ಹೆಲ್ಮೆಟ್ ಹಾರಿ ಹೋಗಿರುತ್ತದೆ. ಅಪಘಾತವಾದ ರಸ್ತೆ ರಾ.ಹೆ. ಎಂದರೆ ಸರಿ. ಸದ್ರಿ ಮೋಟಾರ್ ಸೈಕಲ್ ನ್ನು ಚಾಲನೆ ಮಾಡಲು ಕಲಿಯುತ್ತಿರುವ ಸಮಯದಲ್ಲಿ ನನ್ನ ಹತ್ತಿರ ವಾಹನ ಚಾಲನಾ ಪರವಾನಗಿ ಮಾಡಿಸಿರಲಿಲ್ಲ.

ಸದ್ರಿ ವ್ಯಾಜ್ಯಕ್ಕೆ ಅರ್ಜಿ ಸಲ್ಲಿಸುವ ಮಾಹಿತಿಯನ್ನು ನನ್ನ ಅಮ್ಮ ಮತ್ತು ಭಾವ ನೀಡಿರುತ್ತಾರೆ. ಅಪಘಾತವಾದ ಸ್ಥಳದಲ್ಲಿ ನನ್ನ ಅಮ್ಮ ಮತ್ತು ಭಾವ ಇರಲಿಲ್ಲ, ಕಾರಣ ಅಪಘಾತ ಹೇಗಾಯಿತ್ತೆಂದು ಅವರಿಗೆ ಹೇಳಲು ಬರುವುದಿಲ್ಲವೆಂದರೆ ಸರಿ. ನಾನು 8 ನೇ ತರಗತಿಯವರೆಗೆ ಓದಿರುತ್ತೇನೆ. ನನ್ನ ಅಣ್ಣ ಎಸ್.ಎಸ್.ಎಲ್.ಸಿ. ಮಾಡಿರುತ್ತಾನೆ. ಎಲ್ಲರೂ ಮನೆಯಲ್ಲಿದ್ದಾರೆ. ನನ್ನ ಭಾವ ಆಟೋ ಚಾಲನೆ ಮಾಡುತ್ತಾರೆ. ಸದ್ರಿ ಕ್ಲೇಮ್ ಅರ್ಜಿಯನ್ನು ಪೋಲೀಸ್ ದಾಖಲೆಗಳ ಆಧಾರದ ಮೇಲೆ ಮಾಡಿರುತ್ತೇನೆಂದರೆ ಸರಿ. ಪೋಲೀಸರಿಗೆ ದೂರನ್ನು ಅಪಘಾತಪಡಿಸಿದ ವಾಹನದ ಚಾಲಕರು ನೀಡಿರುತ್ತಾರೆ, ನಾವು ಹೋಗಿ ಕೊಡುವ ಸಮಯದಲ್ಲಿ ಪೋಲೀಸಿನವರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಈಗಾಗಲೇ ದೂರು ದಾಖಲಾಗಿದೆಂದು ನಮಗೆ ತಿಳಿಸಿರುತ್ತಾರೆ. ನನ್ನ ಭಾವ ಮತ್ತು ನನ್ನ ಗೆಳೆಯ ಕಾರ್ತಿಕ್ ರವರು ಪೋಲೀಸರಿಗೆ ದೂರನ್ನು ನೀಡಲು ಹೋಗಿರುತ್ತಾರೆ. ಅಪಘಾತವಾದ ಎಷ್ಟು ಸಮಯದ ನಂತರ ಪೋಲೀಸರಿಗೆ ದೂರನ್ನು ನೀಡಲು ಹೋಗಿರುತ್ತಾರೆಂದರೆ ನನಗೆ ಹೇಳಲು ಬರುವುದಿಲ್ಲ. ನನ್ನ ಗೆಳೆಯ ಕಾರ್ತಿಕ್ ರವರು ನನಗೆ ವಿಷಯ ತಿಳಿಸಿರುತ್ತಾರೆ. ನನ್ನ ಮೇಲೆ ಪ್ರಕರಣ ದಾಖಲಾಗಿದೆಂದು ಸದ್ರಿ ದೂರನ್ನು ಸಲ್ಲಿಸಿದ 2 ತಿಂಗಳ ನಂತರ ಗೊತ್ತಾಗಿರುತ್ತದೆ. ಆ ರೀತಿ ನನಗೆ ಗೊತ್ತಾದ ನಂತರ ನಾನೇದರೂ ಸದ್ರಿ ಪ್ರಕರಣವನ್ನು ರದ್ದುಗೊಳಿಸುವಂತೆ ನಾನು ಯಾವುದೇ

ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನನ್ನ ಮೇಲೆ ಹಾಕಿರುವ ಪ್ರಕರಣ ಸುಳ್ಳು ಪ್ರಕರಣ ಆಗಿರುತ್ತದೆ. ಸದ್ರಿ ವಿಷಯ ಕುರಿತು ಮೇಲಾಧಿಕಾರಿಗಳವರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ನನಗೆ ಢಿಕ್ಕಿಪಡಿಸಿದ ವಾಹನದ ಚಾಲಕರ ಮೇಲೆ ಯಾವುದೇ ದೂರನ್ನು ನೀಡಿರುವುದಿಲ್ಲ. ಪೋಲೀಸಿನವರು ನನ್ನ ವಿರುದ್ಧ ನನ್ನ ಅಜಾಗೂಕತೆಯಿಂದ ತಪ್ಪಾಗಿರುತ್ತದೆಂದು ನನ್ನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆಂದರೆ ಸರಿ, ಆದರೆ ಅಪಘಾತ ನನ್ನ ತಪ್ಪಿ ನಿಂದ ಆಗಿರುವುದಿಲ್ಲವೆಂದು ಮುಂದುವರೆದು ನುಡಿಯುತ್ತಾರೆ ಮತ್ತು ಬುಲೆಟ್ ಸವಾರನು ಹಿಂದಿನಿಂದ ಬಂದು ನನ್ನ ಗಾಡಿಗೆ ಹೊಡೆದಿರುತ್ತಾನೆ. ಇದೇ ಪ್ರಥಮ ಬಾರಿಗೆ ನಾನು ನ್ಯಾಯಾಲಯದಲ್ಲಿ ಪೋಲೀಸಿನವರಿಗೆ ದೂರು ಕೊಡಲು ನನ್ನ ಗೆಳೆಯ ಕಾರ್ತಿಕ್ ಮತ್ತು ಭಾವರವರು ಹೋಗಿರುತ್ತಾರೆಂದು ಹೇಳುತ್ತಿದ್ದೇನೆಂದರೆ ಸರಿ. ಇಂದು ನಾನು ನ್ಯಾಯಾಲಯದಲ್ಲಿ ಪರಿಹಾರ ಸಿಗಬೇಕೆಂದು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿ. ನನ್ನ ಪ್ರಕಾರ ಸದ್ರಿ ಅಪಘಾತವು ಬುಲೆಟ್ ಸವಾರನು ನನ್ನ ಮೋಟಾರ್ ಸೈಕಲ್ ಗೆ ಹಿಂದಿನಿಂದ ಬಂದು ಢಿಕ್ಕಿ ಹೊಡೆದಿರುತ್ತಾನೆ. ಸದ್ರಿ ಬುಲೆಟ್ ಸವಾರನು ನನ್ನ ಮೋಟಾರ್ ಸೈಕಲ್ ಗೆ ಹಿಂದಿನಿಂದ ಬಂದು ಢಿಕ್ಕಿ ಹೊಡೆದಿದ್ದಾನೆಂದು ತೋರಿಸಲು ನಾನು ಹಾಕಿದ ದಾಖಲೆಗಳಲ್ಲಿ ಕಂಡುಬರುತ್ತದೆಯಾ ಎಂದರೆ ಇಲ್ಲ. ನನ್ನ ಮೋಟಾರ್ ಸೈಕಲ್ ನ ಎದುರಿನ ಭಾಗ ಜಖಂಗೊಂಡಿರುತ್ತದೆಂದರೆ ಸರಿ. ನನ್ನ ಎದುರುಗಡೆ ಯಾವುದೇ ಗಾಡಿ ಇರಲಿಲ್ಲ. ನನ್ನ ಪ್ರಕಾರ ನಾನು ಕುಂಭಾಶಿಯಿಂದ ಹೊರಟಿದ್ದೆ ಆ ಸಮಯದಲ್ಲಿ ನನ್ನ ಎದುರುಗಡೆ ಯಾವುದೇ ಗಾಡಿ ಇರಲಿಲ್ಲ. ನನಗೆ ಢಿಕ್ಕಿಪಡಿಸಿದೆನ್ನಲಾದ ಮೋಟಾರ್ ಸೈಕಲ್ ಗೆ ಎಲ್ಲಿ ಜಖಂ ಆಗಿರುತ್ತದೆಂದು ನನಗೆ ಹೇಳಲು ಬರುವುದಿಲ್ಲ. ಸದ್ರಿ ಪ್ರಕರಣದಲ್ಲಿ ನನ್ನ ವಿರುದ್ಧ ಹಾಕಿರುವ ದೋಷಾರೋಪಣಾ ಪಟ್ಟಿಯನ್ನು

ನ್ಯಾಯಾಲಯಕ್ಕೆ ಸಲ್ಲಿಸದೇ ಇರಲು ಕಾರಣವೇನು ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಕೆಎ-20-ಇಟಿ-9142 ನೇ ಮೋಟಾರ್ ಸೈಕಲ್ ಬ್ರಿಡ್ಜ್ ನ ಬಳಿ ನಾನು ಮುಂದಿನಿಂದ ಹೋಗುತ್ತಿದ್ದಾಗ ನನ್ನ ಹಿಂದಿನಿಂದ ಬಂದು ಢಿಕ್ಕಿಪಡಿಸಿರುತ್ತದೆಂದರೆ ಸರಿಯಲ್ಲ. ನನ್ನ ಹಿಂದಿನಿಂದ ಕೆಎ-20-ಇಟಿ-9142 ನೇ ಮೋಟಾರ್ ಸೈಕಲ್ ನ್ನು ಅಪಘಾತ ಸಂಭವಿಸುವ ತನಕ ಗಮನಿಸಿರುವುದಿಲ್ಲ. ಸದ್ರಿ ಅಪಘಾತವು ನನ್ನ ನಿರ್ಲಕ್ಷ್ಯತೆ ಮತ್ತು ಅಜಾಗರೂಕತೆಯಿಂದ ಸಂಭವಿಸಿರುತ್ತದೆಂದರೆ ಸರಿಯಲ್ಲ.

ನಾನು ಗಾರೆ ಕೆಲಸ ಮಾಡುತ್ತಿದ್ದೆ. ನಾನು ಈಗ ಏನೂ ಉದ್ಯೋಗ ಮಾಡುತ್ತಿಲ್ಲ, ಮನೆಯಲ್ಲಿದ್ದೇನೆ. ನಾನು ಗಾರೆ ಕೆಲಸ ಬೇರೆಯವರ ಕೈಕೆಳಗೆ ಮಾಡುತ್ತಿದ್ದೆ. ನಾನು ಗಾರೆ ಕೆಲಸಕ್ಕೆ ಕರೆದಾಗ ಹೋಗುತ್ತೇನೆ, ಪ್ರತೀ ದಿನ ಕೆಲಸ ಇರುವುದಿಲ್ಲ, ವಾರಕ್ಕೆ ಒಂದೆರಡು ದಿನ ಕೆಲಸ ಸಿಗುತ್ತದೆ. ಗಾರೆ ಕೆಲಸಕ್ಕೆ ಒಂದು ದಿನಕ್ಕೆ 650/- ರೂಪಾಯಿ ಕೂಲಿ ಸಿಗುತ್ತದೆ. ವೈದ್ಯರು ನನಗೆ ಕೆಲಸ ಮಾಡಬಾರದೆಂದು ಸೂಚಿಸಿರುವುದಿಲ್ಲ, ಆದರೆ ನನಗೆ ಈಗ ಕೆಲಸ ಮಾಡಲು ಆಗುತ್ತಿಲ್ಲ. ಅಪಘಾತವಾದ ನಂತರ ನಾನು ಬೇರಾವುದೇ ಕೆಲಸಕ್ಕೆ ಹೋಗಿರುವುದಿಲ್ಲ. ನಾನು ಗಾರೆ ಕೆಲಸ ಮಾಡುತ್ತಿದ್ದ ಬಗ್ಗೆ ಹಾಗೂ ಅದರಿಂದ ಆದಾಯ ಇದ್ದ ಬಗ್ಗೆ ತೋರಿಸಲು ಯಾವುದೇ ದಾಖಲೆಗಳಿಲ್ಲವೆಂದರೆ ಸರಿ. ನನಗೆ ಆಗಿರುವ ಆಸ್ಪತ್ರೆಯ ಖರ್ಚಿನ ಬಾಬ್ತು ನನ್ನ ಅಕ್ಕ,ಅಣ್ಣ ಮತ್ತು ಅಪ್ಪನವರು ಕೊಟ್ಟಿರುತ್ತಾರೆ. ನನ್ನ ಬಳಿ ಯಾವುದೇ ಹಣ ಇರಲಿಲ್ಲ, ಏಕೆಂದರೆ ಆ ರೀತಿ ನಾನು ಉದ್ಯೋಗ ಮಾಡುತ್ತಿರಲಿಲ್ಲ ಅದಕ್ಕಾಗಿ ನನ್ನ ಬಳಿ ಹಣ ಇರಲಿಲ್ಲವೆಂದರೆ ಸರಿ. ಮಣಿಪಾಲದ ಆಸ್ಪತ್ರೆಯಲ್ಲಿ ನನಗೆ ಸಂಪೂರ್ಣ ಆರೋಗ್ಯ ಸುರಕ್ಷಾ

ವಿಮೆಯಿಂದ ಸ್ವಲ್ಪ ಸಿಕ್ಕಿರುತ್ತದೆ. ಶಂಕರ ಆರೋಗ್ಯ ಟ್ರಸ್ಟ್ ನಿಂದ ಯಾವುದೇ ಹಣ ಸಿಕ್ಕಿರುವುದಿಲ್ಲ. ಬೇರೆ ಬೇರೆ ವಿಮೆಯಡಿಯಲ್ಲಿ ನಾನು ಖರ್ಚು ಮಾಡಿದ ಹಣ ಸಿಕ್ಕಿರುತ್ತದೆಂದರೆ ಸರಿಯಲ್ಲ. ನಾನು ಕೆಎಂಸಿ ಆಸ್ಪತ್ರೆಯನ್ನು ಹೊರತುಪಡಿಸಿ ಬೇರೆಲ್ಲೂ ಕೂಡ ಚಿಕಿತ್ಸೆ ಪಡೆದಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವೈದ್ಯಕೀಯ ಖರ್ಚು, ಪೌಷ್ಠಿಕ ಆಹಾರಕ್ಕೆ, ಓಡಾಟಕ್ಕೆ, ಪರಿಚಾರಕರಿಗೆ, ಖರ್ಚಾಗಿಲ್ಲವೆಂದರೆ ಸರಿಯಲ್ಲ. ನನಗೆ ಈಗ 29 ವರ್ಷ. ನನಗೆ ಈಗ 36 ವರ್ಷವಾಗಿರುತ್ತದೆಂದರೆ ಸರಿಯಲ್ಲ. ನಾನು 1995 ರಲ್ಲಿ ಜನಿಸಿರುತ್ತೇನೆಂದು ತೋರಿಸಲು ದಾಖಲೆ ಇರುತ್ತದೆ. ಸದ್ರಿ ಅಪಘಾತದಿಂದ ನನಗೆ ಯಾವುದೇ ರೀತಿಯ ತೊಂದರೆಯಾಗಿಲ್ಲ, ನಾನು ಹಿಂದಿನಂತೆ ಕೆಲಸ ಮಾಡುತ್ತಿದ್ದೇನೆಂದರೆ ಸರಿಯಲ್ಲ. ಸದ್ರಿ ಅಪಘಾತವು ನನ್ನ ತಪ್ಪಿ ನಿಂದ ಆದ ಕಾರಣ 2 ನೇ ಎದ್ರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಂ.ಎ.ಸಿ.ಟಿ.
ಉಡುಪಿ.